# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭

http://www.kasapa.in e-mail : kannadaparishattu@gmail.com


---

ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ** / ೨೦೨೨-೨೩ ದಿನಾಂಕ : ೦೮-೦೭-೨೦೨೨

*ಇವರಿಗೆ*

**ಸಂಪಾದಕರು / ಮುಖ್ಯ ವರದಿಗಾರರು**

..................................................

ಬೆಂಗಳೂರು

ಪತ್ರಿಕಾ/ಟಿ.ವಿ. ಹೇಳಿಕೆ-ಪ್ರಕಟಣೆ ಕೃಪೆಗಾಗಿ

# ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿರಿಯ ಸಾಹಿತಿ ನಾಡೋಜ ಡಾ. ಕೋ. ಚೆನ್ನಬಸಪ್ಪ ಅವರ ಜನ್ಮಶತಾಬ್ದಿ ಸಮಾರಂಭ

ಕನ್ನಡ ಸಾಹಿತ್ಯ ಪರಿಷತ್ತು, **ಕೋಚೆ ಸಾಹಿತ್ಯ ಮತ್ತು ಶಿಕ್ಷಣ ಟ್ರಸ್ಟ್ (ನೋಂ), ಕರ್ನಾಟಕ ಗಾಂಧಿ ಸ್ಮಾರಕ ನಿಧಿ (ನೋಂ)** ಹಾಗೂ **ಭಾರತೀಯ ವಿದ್ಯಾಭವನ** ಇವರುಗಳ ಸಹಭಾಗಿತ್ವದಲ್ಲಿ **ದಿನಾಂಕ ೧೦-೦೭-೨೦೨೨ರ ಭಾನುವಾರದಂದು ಬೆಳಿಗ್ಗೆ ೧೦.೩೦ಕ್ಕೆ ಗಾಂಧಿ ಭವನದಲ್ಲಿರುವ ಮಹದೇವ ದೇಸಾಯಿ ಸಭಾಂಗಣದಲ್ಲಿ** ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿರಿಯ ಸಾಹಿತಿ **ನಾಡೋಜ ಡಾ. ಕೋ. ಚೆನ್ನಬಸಪ್ಪ ಅವರ ಜನ್ಮಶತಾಬ್ದಿ ಸಮಾರಂಭವನ್ನು** ಆಯೋಜಿಸಲಾಗಿದೆ.

ಈ ಸಮಾರಂಭವನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ **ಶಿವರಾಜ ವಿ. ಪಾಟೀಲ್** ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾದ **ಡಾ. ಬಿ.ಎಲ್. ಶಂಕರ್,** ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ **ನಾಡೋಜ ಡಾ. ವೂಡೇ ಪಿ. ಕೃಷ್ಣ,** ಕೃಷಿ ಇಲಾಖೆಯ ಕಾರ್ಯದರ್ಶಿಗಳಾದ **ಶ್ರೀ ಶಿವಯೋಗಿ ಕಳಸದ** ಇವರುಗಳು ಸಮಾರಂಭದಲ್ಲಿ **ಮುಖ್ಯ ಅತಿಥಿಗಳಾಗಿ** ಭಾಗವಹಿಸಲಿದ್ದಾರೆ. ಮೇರಿಲ್ಯಾಂಡ್ ಯೂನಿವರ್ಸಿಟಿಯ ಡೀನ್ ಆದ **ಡಾ. ಪ್ರಭುದೇವ ಕೋಣನ** ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ **ನಾಡೋಜ ಡಾ. ಮಹೇಶ ಜೋಶಿ** ಅವರು ಸಮಾರಂಭದ **ಅಧ್ಯಕ್ಷತೆ** ವಹಿಸಲಿದ್ದಾರೆ.

**ಮಧ್ಯಾಹ್ನ ೧೨-೩೦ ರಿಂದ ೧-೪೫ರ ವರೆಗೆ** ನಡೆಯುವ **ವಿಚಾರ ಗೋಷ್ಠಿಯ** ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತರಾದ **ಶ್ರೀ ಲಕ್ಷ್ಮಣ ಕೊಡಸೆ** ಅವರು ವಹಿಸಲಿದ್ದಾರೆ, **ಆಕಾಶವಾಣಿಯ** ವಿಶ್ರಾಂತ ನಿರ್ದೇಶಕರಾದ **ಡಾ. ಬಸವರಾಜ ಸಾದರ** ಅವರು **ಕೋಚೆ ಮತ್ತು ಪ್ರಗತಿಶೀಲ ಸಾಹಿತ್ಯ ಚಳವಳಿ** ಕುರಿತು ಹಾಗೂ ಹಿರಿಯ ಸಾಹಿತಿಗಳಾದ **ಪ್ರೊ. ಕೆ.ಎಸ್. ಮಧುಸೂದನ** ಅವರು **ಕೋಚೆ**

**ಅವರ ಅರವಿಂದ ಸಾಹಿತ್ಯ ಅನುವಾದಗಳು –** ಕುರಿತು ವಿಷಯ ಮಂಡಿಸಲಿದ್ದಾರೆ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರಾದ **ಶ್ರೀ ಬಿ.ಎಂ. ಪಟೇಲ್ ಪಾಂಡು** ಅವರು ಗೋಷ್ಠಿಯಲ್ಲಿ ಉಪಸ್ಥಿತರಿರುವರು.

**ಮಧ್ಯಾಹ್ನ ೩–೦೦ ರಿಂದ ೪–೦೦ರ ವರೆಗೆ** ನಡೆಯುವ **'ನಾನು ಕಂಡಂತೆ ಕೋಚೆ'** ಕುರಿತು ಹಿರಿಯ ಸಂಶೋಧಕರಾದ **ಡಾ. ವೀರಶೆಟ್ಟಿ ಬಿ. ಗಾರಂಪಳ್ಳಿ,** ಸಾಹಿತಿಗಳಾದ **ಶ್ರೀ ಪ್ರಕಾಶ ಗಿರಿಮಲ್ಲನವರ,** ಕೋಚೆ ಅವರ ಮಗಳಾದ **ಶ್ರೀಮತಿ ಶಾಂತ ಜಯಪ್ರಸಾದ್,** ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯ ಅಧ್ಯಕ್ಷರಾದ **ಡಾ. ಕೆ.ಸಿ. ಗುರುದೇವ್,** ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರಾದ **ಶ್ರೀ ಕೆ.ಬಿ. ಗುದಗಿ** ಅವರುಗಳು ಮಾತನಾಡಲಿದ್ದಾರೆ.

**ಸಂಜೆ ೪–೦೦ ರಿಂದ ೫–೩೦ರ ವರೆಗೆ** ನಡೆಯುವ **ಸಮಾರೋಪ ಸಮಾರಂಭ**ದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ **ಸಂತೋಷ್ ಹೆಗ್ಡೆ** ಅವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತೀಯ ವಿದ್ಯಾಭವನದ ಅಧ್ಯಕ್ಷರಾದ **ಶ್ರೀ ಕೆ.ಜಿ. ರಾಘವನ್** ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರಾದ **ಶ್ರೀ ಕೆ.ಎ. ದಯಾನಂದ** ಅವರುಗಳು **ಮುಖ್ಯ ಅತಿಥಿಗಳಾಗಿ** ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ.ಭ. ರಾಮಲಿಂಗಶೆಟ್ಟಿ** ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ **ನಾಡೋಜ ಡಾ. ಮಹೇಶ ಜೋಶಿ** ಅವರು ಸಮಾರೋಪ ನುಡಿಗಳನ್ನಾಡಲಿದ್ದಾರೆ.

ಇದರೊಂದಿಗೆ ಆಹ್ವಾನಪತ್ರಿಕೆ ಲಗತ್ತಿಸಿದೆ.

**ಶ್ರೀನಾಥ ಜೆ.**
ಮಾಧ್ಯಮ ಸಲಹೆಗಾರರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು